# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 440 |
| ಸದಸ್ಯರ ಹೆಸರು | : | ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 23.09.2020. |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ದೇವದುರ್ಗದಿಂದ ಗೂಗಲ್ ಮತ್ತು ಗೂಗಲ್‌ನಿಂದ ಸಂಕೇಶ್ವರಾಳ ರಸ್ತೆ ಕಾಮಗಾರಿ ಕಳೆದ 3-4 ವರ್ಷಗಳಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ಮತ್ತು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? | ಸರ್ಕಾರದ ಆದೇಶ ಸಂ: ಲೋಇ 207 ಸಿಐಎಸ್ 2018, ಬೆಂಗಳೂರು, ದಿನಾಂಕ:02-11-2019 ರನ್ವಯ ಈ ಕೆಳಕಂಡ ಕಾಮಗಾರಿಗಳಿಗೆ ರೂ.110.20 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರ ನೀಡಿರುತ್ತದೆ.<br><br>(1) ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗುಗಲ್ ವಾಯಾ ಅರಕೇರಾ, ಸುಂಕೇಶ್ವರಹಾಳ, (ಜಿ.ಮು.ರ) ರಸ್ತೆ ಕಿ.ಮೀ 0.00 ರಿಂದ 71.15 (ಆಯ್ದು ಭಾಗಗಳಲ್ಲಿ) ವರೆಗೆ ರಸ್ತೆ ಮರು ಸುಧಾರಣೆ ಮಾಡುವುದು ಅಂದಾಜು ಮೊತ್ತ ರೂ 62.10 ಕೋಟಿಗಳು<br><br>(2) ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ದೇವದುರ್ಗ ದಿಂದ ಗೂಗಲ್ ವಾಯಾ ಕೊಪ್ಪರ (ಜಿ.ಮು.ರ) ರಸ್ತೆ ಕಿ.ಮೀ 0.00 ರಿಂದ 28.00 ವರೆಗೆ ರಸ್ತೆ ಮರು ಸುಧಾರಣೆ ಮಾಡುವುದು ಅಂದಾಜು ಮೊತ್ತ ರೂ 35.50 ಕೋಟಿಗಳು<br><br>(3) ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಅರಕೇರಾ ಕ್ರಾಸ್ ದಿಂದ ವಾಯಾ ಗಲಗ್ ನಾರಬಂಡಾ, ರಸ್ತೆ ಕಿ.ಮೀ 0.00 ರಿಂದ 28.20 (ಆಯ್ದು ಭಾಗಗಳಲ್ಲಿ)ವರೆಗೆ ರಸ್ತೆ ಸುಧಾರಣೆ ಮಾಡುವುದು ಅಂದಾಜು ಮೊತ್ತ ರೂ 12.60 ಕೋಟಿಗಳು<br><br>ಅಂದಾಜು ಪಟ್ಟಿಗಳನ್ನು ದಿನಾಂಕ:30.10.2019 ರಂದು ಜರುಗಿದ, 91ನೇ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಹಾಗೂ ಅಂದಾಜು ಪಟ್ಟಿ ಪರಿಶೀಲನಾ ಸಮಿತಿಯಲ್ಲಿ ಮಂಡಿಸಲಾಗಿ, ದಿನಾಂಕ:02.03.2020 ರಂದು ಸದರಿ ಸಮಿತಿಯು ಈ ಪ್ರಸ್ತಾವನೆಗೆ ಅನುಮೋದನೆ ನೀಡಿರುತ್ತದೆ. |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | | ಈ ಮೇಲ್ಕಂಡ ರಸ್ತೆಗಳ ಆರ್ಥಿಕ ಬಿಡ್ ಸರ್ಕಾರಕ್ಕೆ ಸಲ್ಲಿಕೆಯಾಗಿದ್ದು, ಆರ್ಥಿಕ ಇಲಾಖೆಯು ಪ್ರಸಕ್ತ ಆರ್ಥಿಕ ಪರಿಸ್ಥಿತಿಯಲ್ಲಿ ಕಾರ್ಯಗತ (grounded) ಗೊಂಡಿರುವ ಕಾಮಗಾರಿಗಳ ಅನುಷ್ಠಾನ ಮತ್ತು ಅವುಗಳ ಬಿಲ್ಲುಗಳ ಪಾವತಿಗೆ ಆದ್ಯತೆಯ ಮೇಲೆ ಕ್ರಮ ವಹಿಸಬೇಕಾಗಿರುವುದರಿಂದ ಸದರಿ ಕಾಮಗಾರಿ ಕುರಿತಂತೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ತಿಳಿಸಿರುತ್ತದೆ. |

ಕಡತ ಸಂಖ್ಯೆ: ಲೋಇ 154 ಸಿಐಎಸ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ,
ಲೋಕೋಪಯೋಗಿ ಮತ್ತು
ಸಮಾಜ ಕಲ್ಯಾಣ ಇಲಾಖೆ